ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
RaithaBhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

News about "Prashikshana" Faculty Development Programmed at KSRDPR University is published in Kannada Newspaper Date:11.11.2021

ಗ್ರಾವಿವಿಯಲ್ಲಿ 'ಪ್ರಶಿಕ್ಷಣ' ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಂ

ಗದಗ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ನಡೆದ-'ಪ್ರಶಿಕ್ಷಣ' ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಕುಲಪತಿ ಪ್ರೊ.ವಿಷ್ಣುಕಾಂತ ಎಸ್.ಚಟಪಲ್ಲಿ ಮಾತನಾಡಿದರು.

ಗದಗ: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಸೆಂಟರ್ ಫಾರ್ ಎಜುಕೇಶನಲ್ ಆ್ಯಂಡ್ ಸೋಷಿಯಲ್ ಸ್ಟಡೀಸ್ ಸಹಯೋಗದಲ್ಲಿ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನಲ್ಲಿರುವ ಕೌಶಲ್ಯ ವಿಕಾಸ ಭವನದಲ್ಲಿ 'ಪ್ರಶಿಕ್ಷಣ' ಶೀರ್ಷಿಕೆಯಡಿ ಒಂದು ದಿನದ ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಂ ನಡೆಯಿತು.

ಬೆಂಗಳೂರಿನ ಸೆಸ್ ಹಿರಿಯ ಸಲಹೆಗಾರ ಡಾ.ರಾಜೇಂದ್ರ ಕುಮಾರ್ ಜೋಶಿ ಹಾಗೂ ಸೆಸ್ ಸಂಸ್ಥೆ ಮುಖ್ಯಸ್ಥೆ ಡಾ.ಪದ್ಮಾವತಿ ಅವರು ರಾಷ್ಟ್ರೀಯ ಶಿಕ್ಷಣ ನೀತಿ-2020 ಸಮಗ್ರ ಅಂತರ್ ಶಿಸ್ತೀಯ ಶಿಕ್ಷಣ, ಫಲಿತಾಂಶ ಆಧಾರಿತ ಶಿಕ್ಷಣ ಹಾಗೂ ನಾವೀನ್ಯತೆಯಿಂದ ಕೂಡಿದ ಬಹು ಶಿಸ್ತೀಯ ಕಲಿಕಾ ವಿಧಾನಗಳ ಕುರಿತು ವಿವರಿಸಿದರು.

ಕರ್ನಾಟಕ ಲಾ ಸೊಸೈಟಿ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಎಜುಕೇಶನ್ ಅಂಡ್ ರಿಸರ್ಚ್ ಪ್ರಾಧ್ಯಾಪಕ ಪ್ರೊ.ಕೀರ್ತಿ ಶಿವಕುಮಾರ್ ಅವರು, ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಚಟುವಟಿಕೆ ಆಧಾರಿತ ಕೌಶಲ್ಯ ಎಂಬ ವಿಷಯದ ಕುರಿತು ಸಂವಾದ ನಡೆಸಿದರು.

ನಂತರ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾದ ಎಲ್ಲಾ ಪದವಿ ಕಾರ್ಯಕ್ರಮಗಳ ಪಠ್ಯ ಸುಧಾರಣೆಗಾಗಿ ಆಯಾ ವಿಭಾಗಗಳ ಪ್ರಾಧ್ಯಾಪಕರು ಹಾಗೂ ವಿಷಯ ಪರಿಣಿತರ ಗುಂಪು ಚರ್ಚೆ ನಡೆಸಿ ಮಹತ್ವದ ವಿಚಾರಗಳನ್ನು ಪ್ರಸ್ತುತಪಡಿಸಿದರು.

ಗ್ರಾವಿವಿ ಕುಲಪತಿ ಪ್ರೊ.ವಿಷ್ಣುಕಾಂತ ಎಸ್. ಚಟಪಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಬಸವರಾಜ ಎಲ್. ಲಕ್ಕಣ್ಣವರ, ಸೆಸ್ ಬೆಂಗಳೂರಿನ ಪ್ರತಿನಿಧಿಗಳಾದ ಡಾ.ರಾಜೇಂದ್ರಕುಮಾರ್ ಜೋಶಿ ಮತ್ತು ಡಾ.ಪದ್ಮಾವತಿ, ವಿವಿಧ ಕ್ಷೇತ್ರಗಳ ವಿಷಯಪರಿಣಿತರು, ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸಂಯೋಜಕ ಡಾ.ಅಭಯಕುಮಾರ್ ಗಸ್ತಿ ಸ್ವಾಗತಿಸಿದರು.